# 1. ಅವರೇ ರಾಜರತ್ನಂ !                     – ಕೆ. ಪಿ. ಪೂರ್ಣಚಂದ್ರ ತೇಜಸ್ವಿ

ಕೃತಿಕಾರರ ಪರಿಚಯ :

- ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರು 1938 ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು.
- ಇವರು ಹುಲಿಯೂರಿನ ಸರಹದ್ದು, ನಿಗೂಢ ಮನುಷ್ಯರು, ಜುಗಾರಿ ಕ್ರಾಸ್, ಚಿದಂಬರ ರಹಸ್ಯ, ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್ , ಅಬಚೂರಿನ ಪೋಸ್ಟಾಫೀಸು ಮತ್ತು 'ಕರ್ವಾಲೋ' ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ.
- 'ಅವರೇ ರಾಜರತ್ನಂ!' ಗದ್ಯ ಭಾಗವನ್ನು ತೇಜಸ್ವಿ ಅವರ 'ಅಣ್ಣನ ನೆನಪು' ಕೃತಿಯಿಂದ ಆರಿಸಲಾಗಿದೆ.

**1.ಪದಗಳ ಅರ್ಥ :**

**ಅಂಗಲಾಚು** – ಬೇಡು
**ಚಾಡಿ** –ಇಲ್ಲದ್ದನ್ನು ಹೇಳು
**ಬಗಲು** – ಪಕ್ಕೆ; ಕಂಕುಳು.
**ಶಿರಸಾವಹಿಸು** – ಹೇಳಿದಂತೆ ಮಾಡು
**ಅಪ್ರತಿಭ** – ದಿಗ್ಭ್ರಮೆ
**ಜೋರುಮಾಡು** – ದಬಾಯಿಸು
**ಮೂರ್ಖತನ** – ದಡ್ಡತನ
**ಸಾಮೂಹಿಕ** – ಒಟ್ಟು
**ಕಿರುಚು** – ಜೋರಾಗಿ ಕೂಗು
**ಧೋತ್ರ** – ಪಂಚೆ
**ಸೋಮಾರಿ** – ಮೈಗಳ್ಳ; ಆಲಸಿ.
**ಛೀಮಾರಿ ಹಾಕು** – ತಿರಸ್ಕಾರ; ಧಿಕ್ಕರಿಸು; ಅಪಮಾನಿಸು.

**2. ಪ್ರಶ್ನೆಗಳು :**

**ಅ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಗಳಿಂದ ಸೂಕ್ತವಾದುದನ್ನು ಆಯ್ದು ಬರೆಯಿರಿ.**

1. ಅವರೇ ರಾಜರತ್ನ! ಗದ್ಯಭಾಗದ ಆಕರ ಕೃತಿ ____________

ಅ) ಅಣ್ಣನ ಕನಸು ಬ) <u>ಅಣ್ಣನ ನೆನಪು</u> ಕ) ಅಣ್ಣನ ಮನಸು ಡ) ಅಣ್ಣನ ಸೊಗಸು

2. ತೇಜಸ್ವಿ ಅವರು ರಾಜರತ್ನಂ ಅವರನ್ನು ____________ ಎಂದು ಭಾವಿಸಿದ್ದರು.

ಅ) ಕವಿ ಬ) <u>ಭಿಕ್ಷುಕ</u> ಕ) ಗೆಳೆಯ ಡ) ಸನ್ಯಾಸಿ

3. ತೇಜಸ್ವಿಯವರು ಬಾಲ್ಯದಲ್ಲಿ ಕವಿತೆಗಳನ್ನು ____________ ಎಂದು ಭಾವಿಸಿದ್ದರು.

ಅ) ಕವಿಸೃಷ್ಟಿ ಬ) ಮಾಯಾಸೃಷ್ಟಿ ಕ) **<u>ಸಹಜಸೃಷ್ಟಿ</u>** ಡ) ಮಕ್ಕಳಸೃಷ್ಟಿ

4. ಕುವೆಂಪು ಅವರ ಪ್ರಕಾರ ಭಿಕ್ಷೆ ನೀಡುವುದು ಭಿಕ್ಷುಕರನ್ನು ____________

ಅ) ಅವಮಾನಿಸಿದಂತೆ ಬ) ತಿರಸ್ಕರಿಸಿದಂತೆ ಕ) **<u>ಪ್ರೋತ್ಸಾಹಿಸಿದಂತೆ</u>** ಡ) ಗೌರವಿಸಿದಂತೆ

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕುವೆಂಪು ಅವರು ಭಿಕ್ಷೆ ಹಾಕುವುದನ್ನು ಏಕೆ ವಿರೋಧಿಸುತ್ತಿದ್ದರು?

ಕುವೆಂಪುರವರು ಭಿಕ್ಷುಕರಿಗೆ ಭಿಕ್ಷೆ ಹಾಕುವುದು ಅವರನ್ನು ಪ್ರೋತ್ಸಾಹಿಸಿದ ಹಾಗೆ ಎಂದು ವಿರೋಧಿಸುತ್ತಿದ್ದರು.

2.ಕುವೆಂಪು ಅವರನ್ನು ಮನೆಯವರೆಲ್ಲ ಏನೆಂದು ಕರೆಯುತ್ತಿದ್ದರು?

ಕುವೆಂಪು ಅವರನ್ನು ಮನೆಯವರೆಲ್ಲ ಅಣ್ಣ ಕರೆಯುತ್ತಿದ್ದರು.

3. ಕುವೆಂಪು ಅವರ ಮಕ್ಕಳು ಭಿಕ್ಷುಕನೆಂದು ಭಾವಿಸಿದ ಕವಿಯ ಹೆಸರೇನು?

ಕುವೆಂಪು ಅವರ ಮಕ್ಕಳು ಭಿಕ್ಷುಕನೆಂದು ಭಾವಿಸಿದ ಕವಿಯ ಹೆಸರು ರಾಜರತ್ನಂ.

4. ಕುವೆಂಪು ಅವರ ಮಕ್ಕಳು ಚಿಕ್ಕವರಿರುವಾಗ ಕವಿತೆಗಳನ್ನು ಏನೆಂದು ತಿಳಿದಿದ್ದರು?

ಕವಿತೆಗಳು ಸಹ ಹುಡುಗರು, ಮಕ್ಕಳು, ಮರ ಗಿಡ ಇರುವಂತೆ ಪ್ರಪಂಚದಲ್ಲಿರುವ ವಸ್ತುಗಳು ಎಂದು ತಿಳಿದಿದ್ದರು.

5. ಕುವೆಂಪು ಅವರ ಹೆಂಡತಿ ಮಕ್ಕಳ ಹೆಸರೇನು?

ಕುವೆಂಪು ಅವರ ಹೆಂಡತಿ ಹೆಸರು ಹೇಮಾವತಿ ಹಾಗೂ ಅವರ ಮಕ್ಕಳ ಹೆಸರು ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಇಂದುಕ, ತಾರಿಣಿ ಮತ್ತು ಚೈತ್ರ.

6. ರಾಜರತ್ನಂ ಅವರು ಪುಟ್ಟಪ್ಪನವರನ್ನು ಏನೆಂದು ತಮಾಷೆ ಮಾಡಿದರು?

ರಾಜರತ್ನಂ ಅವರು "ಏನು ಪುಟ್ಟಪ್ಪಾ! ಮನೆಗೆ ಬಂದವರನ್ನೆಲ್ಲ ಮುಂದೆ ಕಳಿಸಿಬಿಡಿ ಎಂದು ಹೇಳಿದ್ದೀರಾ?" ಎಂದು ತಮಾಷೆ ಮಾಡಿದರು.

Scanned with CamScanner

ಇ) ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

1. ಕುವೆಂಪು ಅವರಿಗೆ ಭಿಕ್ಷುಕರ ಬಗ್ಗೆ ಇದ್ದ ಅಭಿಪ್ರಾಯವೇನು?

ಭಿಕ್ಷಕ್ಕೆ ಬರುವವರೆಲ್ಲ ಸಾಧಾರಣವಾಗಿ ಮೋಸಗಾರರು, ಅಥವಾ ಕದಿಯಲು ಏನಾದರೂ ಇದೆಯೆ ಎಂದು ನೋಡಿಕೊಂಡು ಹೋಗಲು ಬರುವ ಕಳ್ಳರು, ಇಲ್ಲವೇ ದುಡಿದು ತಿನ್ನಲು ಇಷ್ಟವಿಲ್ಲದ ಸೋಮಾರಿಗಳು. ಆದ್ದರಿಂದ ಅವರಿಗೆ ಭಿಕ್ಷೆ ಹಾಕಿ ಪ್ರೋತ್ಸಾಹಿಸಬೇಡಿ ಎಂದು ಹೇಳುತ್ತಿದ್ದರು.

2.ಕುವೆಂಪು ತಮ್ಮ ಮಕ್ಕಳಿಗೆ ರಾಜರತ್ನಂ ಅವರನ್ನು ಹೇಗೆ ಪರಿಚಯಿಸಿದರು?

ಕುವೆಂಪು ಮಕ್ಕಳ ಕಡೆ ತಿರುಗಿ "ಇವರು ಯಾರು ಗೊತ್ತಾ?" ಎಂದು ಕೇಳಿದರು. ನಮಗೇನು ಗೊತ್ತು. ನಮಗೆ ಗೊತ್ತಿದ್ದರೆ ನಾವ್ಯಾಕೆ ಮುಂದೆ ಹೋಗು ಎಂದು ಹೇಳುತ್ತಿದ್ದೆವು. ನಮ್ಮ ಪಿಳಿಪಿಳಿ ಕಣ್ಣುಗಳನ್ನು ನೋಡಿ "ನಿಮ್ಮ ಪುಸ್ತಕದಲ್ಲಿ ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ ಓದಿದ್ದೀರಲ್ಲಾ. ಇವರೇ ಅದನ್ನು ಬರೆದವರು." ಎಂದು ತಮ್ಮ ಮಕ್ಕಳಿಗೆ ರಾಜರತ್ನಂ ಅವರನ್ನು ಪರಿಚಯಿಸಿದರು.

3.ರಾಜರತ್ನಂ ಅವರ ವೇಷಭೂಷಣಗಳು ಹೇಗಿದ್ದವು?

ರಾಜರತ್ನಂ ಅವರ ವೇಷಭೂಷಣಗಳೆಂದರೆ, ಬಿಳಿಯ ಅಡ್ಡ ಪಂಚೆ ಹಾಗೂ ಬಿಳಿಯ ಅಂಗಿ, ಮೈಮೇಲೆ ನಸು ಕಂದು ಧೋತ್ರ, ಅವರ ಬಗಲಲ್ಲೊಂದು ದೊಡ್ಡ ಜೋಳಿಗೆಯಂಥ ಚೀಲ ಇತ್ತು.

4. ರಾಜರತ್ನಂ ಬಗ್ಗೆ ಮಕ್ಕಳು ಕುವೆಂಪು ಅವರಲ್ಲಿ ಏನೆಂದು ಚಾಡಿ ಹೇಳಿದರು?

ರಾಜರತ್ನಂ ಬಗ್ಗೆ ಮಕ್ಕಳು ಕುವೆಂಪುರವರ ಬಳಿ ಹೋಗಿ "ಯಾವನೊ ಒಬ್ಬ ಮುಂದೆ ಹೋಗು ಅಂದರೂ ಹೋಗದೆ ನಿಂತೇ ಇದ್ದಾನೆ" ಎಂದು ಚಾಡಿ ಹೇಳಿದರು.

5. ಕವಿತೆಯ ಜೊತೆಗೆ ಕವಿಯ ಹೆಸರನ್ನೂ ಏಕೆ ನೆನಪಲ್ಲಿಡಬೇಕು?

ಕವಿತೆಗಳನ್ನು ಕವಿಗಳು ಬರೆಯುತ್ತಾರೆ. ಯಾವ ಕವಿ ಯಾವ ಕವಿತೆಯನ್ನು ಬರೆದಿದ್ದಾರೆ ಎಂಬುದು ನಮಗೆ ತಿಳಿಯಬೇಕಾದರೆ, ಕವಿತೆಯ ಜೊತೆಗೆ ಕವಿಯ ಹೆಸರನ್ನೂ ನೆನಪಲ್ಲಿಡಬೇಕು.

6. ಕುವೆಂಪು ಅವರು ರಾಜರತ್ನಂ ಅವರನ್ನು ಮನೆಯ ಒಳಕ್ಕೆ ಹೇಗೆ ಬರಮಾಡಿಕೊಂಡರು?

ಕುವೆಂಪುರವರು ಮನೆಯಿಂದ ಹೊರಬಂದು ರಾಜರತ್ನಂ ನೋಡಿ, ಅವರ ಗುರುತು ಹಿಡಿದು "ಓಹ್ಹೊ ಬನ್ನಿ ಬನ್ನಿ" ಎಂದೆನ್ನುತ್ತಾ ಅವರೇ ಸರಸರ ಮುಂದುವರೆದು ಗೇಟು ತೆಗೆದು ದಟ್ಟಿಪಂಚೆಯ ಮನುಷ್ಯನನ್ನು ಕರೆದುಕೊಂಡು ಬಂದರು.

7. ಕುವೆಂಪು ಅವರ ಮಕ್ಕಳನ್ನು ಕಂಡಾಗಲೆಲ್ಲಾ ರಾಜರತ್ನಂ ಏನೆಂದು ತಮಾಷೆ ಮಾಡುತ್ತಿದ್ದರು?

ರಾಜರತ್ನಂ ಆಮೇಲೆ ಯಾವಾಗಲಾದರೂ ಮನೆಗೆ ಬಂದಾಗ ಮಕ್ಕಳನ್ನು ಕಂಡರೆ "ಏನ್ರಪ್ಪಾ ಒಳಗೆ ಬರಬಹುದೋ, ಮುಂದೆ ಹೋಗಬೇಕೋ?" ಎಂದು ತಮಾಷೆ ಮಾಡುತ್ತಿದ್ದರು.

ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.

1. ಕುವೆಂಪು ಅವರು ಭಿಕ್ಷೆ ನೀಡಿ ಯಾವ ರೀತಿ ಮೋಸಕ್ಕೆ ಒಳಗಾಗಿದ್ದರು?

ಕುವೆಂಪುರವರು ಭಿಕ್ಷುಕರಿಗೆ ಭಿಕ್ಷೆ ಹಾಕುವುದು ಅವರನ್ನು ಪ್ರೋತ್ಸಾಹಿಸಿದ ಹಾಗೆ ಎಂದು ವಿರೋಧಿಸುತ್ತಿದ್ದರು. ಅವರು ಆಶ್ರಮದಲ್ಲಿದ್ದಾಗ ಒಬ್ಬ ಹೆಳವನಿಗೆ ಮೂರುಕಾಸು, ಆರುಕಾಸು ಭಿಕ್ಷೆ ಹಾಕುತ್ತಿದ್ದರಂತೆ. ಆಗಲೂ ಆಶ್ರಮದ ಸ್ವಾಮಿಗಳಾದ ಸಿದ್ಧೇಶ್ವರಾನಂದರು ಭಿಕ್ಷಾವೃತ್ತಿಗೆ ಉತ್ತೇಜನ ನೀಡುವುದಕ್ಕೆ ಬದ್ಧ ವಿರೋಧಿಗಳಾಗಿದ್ದರು. ಒಮ್ಮೆ ಕುವೆಂಪುರವರು ಆ ಹೆಳವನಿಗೆ ಭಿಕ್ಷೆ ನೀಡುತ್ತಿದ್ದಾಗ ಆಕಸ್ಮಿಕವಾಗಿ ಸಿದ್ಧೇಶ್ವರಾನಂದರು ಅಲ್ಲಿಗೆ ಬಂದರು. ಕೈಕಾಲೆಲ್ಲಾ ಸೊಟ್ಟ ಮಾಡಿಕೊಂಡು ಸ್ವಾಮೀ ಎಂದು ಕರುಣಾಜನಕವಾಗಿ ಅಂಗಲಾಚುತ್ತಿದ್ದ ಆ ಹೆಳವ, ಸಿದ್ಧೇಶ್ವರಾನಂದರನ್ನು ನೋಡಿದ ಕೂಡಲೇ ಸಟ್ಟನೆ ಕೈಕಾಲುಗಳನ್ನು ನೆಟ್ಟಗೆ ಮಾಡಿಕೊಂಡು ವೇಗವಾಗಿ ಆಶ್ರಮದ ಆವರಣದಿಂದ ಆಚೆಗೆ ಓಡಿಹೋದನಂತೆ. ಸಿದ್ಧೇಶ್ವರಾನಂದರು ಕುವೆಂಪುರವರ ಮೂರ್ಖತನಕ್ಕೆ ಸರಿಯಾಗಿ ಛೀಮಾರಿ ಮಾಡಿದರು. ಕುವೆಂಪುರವರಿಗೆ ದುಡ್ಡು ಕಳಕೊಂಡಿದ್ದಕ್ಕಿಂತ ಹೆಚ್ಚಾಗಿ ಇಷ್ಟು ದಿನ ಮೋಸಹೋದೆನಲ್ಲಾ ಎಂಬುದು ಹೆಚ್ಚು ಬೇಸರದ ಸಂಗತಿಯಾಗಿತ್ತು.

2.ಕುವೆಂಪು ಅವರ ಮಕ್ಕಳು ರಾಜರತ್ನಂ ಅವರನ್ನು ಭಿಕ್ಷುಕನೆಂದು ಏಕೆ ಭಾವಿಸಿದರು? ಅದು ಉಂಟು ಮಾಡಿದ ಫಜೀತಿ ಏನು?

ಒಂದು ಸಾರಿ ಬಿಳಿಯ ಅಡ್ಡ ಪಂಚೆ ಹಾಗೂ ಬಿಳಿಯ ಅಂಗಿ, ಮೈಮೇಲೆ ನಸು ಕಂದು ಧೋತ್ರ ಹೊದ್ದವರೊಬ್ಬರು ಕುವೆಂಪುರವರ ಮನೆ ಬಾಗಿಲು ತೆರೆಯಲು ಸಾಹಸ ಪಡುತ್ತಿದ್ದುದನ್ನು ಕುವೆಂಪುರವರ ಮಕ್ಕಳು ನೋಡಿದರು. ಅವರ ಬಗಲಲ್ಲೊಂದು ದೊಡ್ಡ ಜೋಳಿಗೆಯಂಥ ಚೀಲ ಇತ್ತು. ಮನೆಯ ಚಿಕ್ಕ ಗೇಟನ್ನು ಕೊಂಚ ಎತ್ತಿ ಅಗುಳಿ ತೆರೆಯಬೇಕಾಗಿದ್ದರಿಂದ ಹೊರಗಿನಿಂದ ತೆಗೆಯುವುದು ಕಷ್ಟ ಇತ್ತು. ಅವರನ್ನು ನೋಡಿದ ಚೈತ್ರ "ಮುಂದೆ ಹೋಗಪ್ಪಾ" ಎಂದು ಕೂಗಿದ. ಆದರೂ ಆ ವ್ಯಕ್ತಿ ತಮ್ಮ ಗೇಟು ತೆಗೆಯುವ ಪ್ರಯತ್ನ ಮುಂದುವರೆಸಿದ್ದನ್ನು ನೋಡಿ ಕುವೆಂಪುರವರ ಮಕ್ಕಳೆಲ್ಲರೂ ಸಾಮೂಹಿಕವಾಗಿ ಮುಂದೆ ಹೋಗಪ್ಪಾ ಎಂದು ಕಿರುಚಿದರು. ಆಮೇಲೂ ಅವರು ನಿಂತೆ ಇದ್ದುದನ್ನು ನೋಡಿ ಮಕ್ಕಳೆಲ್ಲರೂ ಅಣ್ಣನಿಗೆ ಚಾಡಿ ಹೇಳಲು ಒಳಗೆ ಓಡಿದರು. ಬಂದ ವ್ಯಕ್ತಿಯೇನೂ ಭಿಕ್ಷುಕರ ರೀತಿ ಕೊಳಕು ಬಟ್ಟೆಯಲ್ಲಿ ಭಿಕ್ಷಾಪಾತ್ರೆ ಹಿಡಿದವರಲ್ಲ. ಆದರೆ ಅನೇಕ ದಾಸಯ್ಯಗಳೂ, ಮಾರಿ ಭಕ್ತರೂ, ಎಂತೆಂಥವಕ್ಕೋ ಚಂದಾ ವಸೂಲಿ ಮಾಡಲು ಬರುವವರು ಟ್ರಿಮ್ಮಾಗಿಯೇ ಬಟ್ಟೆ ಹಾಕಿಕೊಂಡು ಭಿಕ್ಷಾಟನೆಗೆ ಬರುತ್ತಿದ್ದುದರಿಂದ ಕುವೆಂಪುರವರ ಮಕ್ಕಳು

ನಮಗೆ ಗುರುತು ಪರಿಚಯ ಇಲ್ಲದೆ ಮನೆಯೊಳಗೆ ಬರುವವರನ್ನೆಲ್ಲಾ ಮುಂದೆ ಕಳಿಸಬೇಕಾದ ಭಿಕ್ಷದವರೆಂದೇ ತೀರ್ಮಾನಿಸಿ ಕೂಗುತ್ತಿದ್ದರು. ಅಣ್ಣನ ಬಳಿ ಹೋಗಿ "ಯಾವನೊ ಒಬ್ಬ ಮುಂದೆ ಹೋಗು ಅಂದರೂ ಹೋಗದೆ ನಿಂತೇ ಇದ್ದಾನೆ" ಎಂದು ಚಾಡಿ ಹೇಳಿದರು. ಅಣ್ಣ ಹೊರಬಂದು ನೋಡಿದವರೇ ಅವರ ಗುರುತು ಹಿಡಿದು "ಓಹ್ಹೊ ಬನ್ನಿ ಬನ್ನಿ" ಎಂದೆನ್ನುತ್ತಾ ಅವರೇ ಸರಸರ ಮುಂದುವರೆದು ಗೇಟು ತೆಗೆದು ದಟ್ಟಿಪಂಚೆಯ ಮನುಷ್ಯನನ್ನು ಕರೆದುಕೊಂಡು ಬಂದರು. ಮುಂದೆ ಹೋಗು ಎಂದು ಹೇಳಿದ ಮನುಷ್ಯನಿಗೆ ಸಿಕ್ಕ ಮರ್ಯಾದೆಯನ್ನು ನೋಡಿ ನಾವು ಅಪ್ರತಿಭರಾಗಿ ನಿಂತಿದ್ದೆವು. ಬಂದಾತ "ಏನು ಪುಟ್ಟಪ್ಪಾ! ಮನೆಗೆ ಬಂದವರನ್ನೆಲ್ಲ ಮುಂದೆ ಕಳಿಸಿಬಿಡಿ ಎಂದು ಹೇಳಿದ್ದೀರಾ?" ಎಂದು ತಮಾಷೆಯಾಗಿ ಕೇಳಿದರು.

**ಉ) ಸಂದರ್ಭದೊಡನೆ ವಿವರಿಸಿರಿ.**

1. "ಯಾವನೊ ಒಬ್ಬ ಮುಂದೆ ಹೋಗು ಅಂದರೂ ಹೋಗದೆ ನಿಂತೇ ಇದ್ದಾನೆ"

ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರತೇಜಸ್ವಿ ಅವರು ಬರೆದಿರುವ 'ಅಣ್ಣನ ನೆನಪು' ಎಂಬ ಕೃತಿಯಿಂದ ಆಯ್ದ 'ಅವರೇ ರಾಜರತ್ನಂ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕುವೆಂಪುರವರ ಮಕ್ಕಳು ಕುವೆಂಪುರವರಿಗೆ ಹೇಳಿದರು. ರಾಜರತ್ನಂ ಅವರು ಕುವೆಂಪುರವರ ಮನೆಗೆ ಬಂದು ಗೇಟು ತೆಗೆಯಲು ಸಾಹಸ ಪಡುತ್ತಿದ್ದನ್ನು ನೋಡಿದ ಮಕ್ಕಳು ರಾಜರತ್ನಂರವರನ್ನು ಭಿಕ್ಷುಕನೆಂದು ಭಾವಿಸಿ "ಮುಂದೆ ಹೋಗಪ್ಪಾ" ಎಂದು ಹೇಳಿದರು. ಆದರೂ ಕೂಡ ರಾಜರತ್ನಂರವರು ಗೇಟನ್ನು ತೆಗೆಯಲು ಮತ್ತೆ ಪ್ರಯತ್ನಿಸುತ್ತದ್ದನ್ನು ಕಂಡು ಕುವೆಂಪುರವರ ಮಕ್ಕಳು ಕುವೆಂಪುರ ಬಳಿ ಹೋಗಿ ಈ ಮೇಲಿನ ಮಾತನ್ನು ಹೇಳಿದರು.

2. "ನಿಮ್ಮ ಪುಸ್ತಕದಲ್ಲಿ ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ ಓದಿದ್ದೀರಲ್ಲಾ. ಇವರೇ ಅದನ್ನು ಬರೆದವರು"

ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರತೇಜಸ್ವಿ ಅವರು ಬರೆದಿರುವ 'ಅಣ್ಣನ ನೆನಪು' ಎಂಬ ಕೃತಿಯಿಂದ ಆಯ್ದ 'ಅವರೇ ರಾಜರತ್ನಂ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕುವೆಂಪುರವರು ಅವರ ಮಕ್ಕಳಿಗೆ ಹೇಳಿದ್ದಾರೆ. ಮಕ್ಕಳ ಕಡೆ ತಿರುಗಿ "ನಿಮ್ಮ ಪುಸ್ತಕದಲ್ಲಿ ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ ಓದಿದ್ದೀರಲ್ಲಾ. ಇವರೇ ಅದನ್ನು ಬರೆದವರು." ಎಂದು ರಾಜರತ್ನಂರವರನ್ನು ಪರಿಚಯಿಸುವಾಗ ಈ ಮೇಲಿನ ಮಾತು ಬಂದಿದೆ.

3."ಏನ್ರಪ್ಪಾ ಒಳಗೆ ಬರಬಹುದೋ, ಮುಂದೆ ಹೋಗಬೇಕೋ?"

ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರತೇಜಸ್ವಿ ಅವರು ಬರೆದಿರುವ 'ಅಣ್ಣನ ನೆನಪು' ಎಂಬ ಕೃತಿಯಿಂದ ಆಯ್ದ 'ಅವರೇ ರಾಜರತ್ನಂ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ರಾಜರತ್ನಂರವರು ಕುವೆಂಪುರವರ ಮಕ್ಕಳಿಗೆ ಹೇಳಿದರು. ಕುವೆಂಪುರವರ ಮಕ್ಕಳು ಒಂದು ಬಾರಿ ರಾಜರತ್ನಂರವರು ಮನೆಗೆ ಬಂದಾಗ "ಮುಂದೆ ಹೋಗಪ್ಪಾ" ಎಂದು ಹೇಳಿದರು. ರಾಜರತ್ನಂರವರು ಪರಿಚಯವಾದ ನಂತರ ಅವರು ಅನೇಕ ಬಾರಿ ಕುವೆಂಪುರವರ ಮನೆಗೆ ಬಂದಾಗ ಈ ಮೇಲಿನ ಮಾತನ್ನು ತಮಾಷೆಯಾಗಿ ಹೇಳುತ್ತಿದ್ದರು.

**3. ಭಾಷಾಭ್ಯಾಸ**

**ಅ) ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

1. ಅಪ್ಪ, ಅಣ್ಣ, ತಮ್ಮ, ಸ್ನೇಹಿತ. = ಸ್ನೇಹಿತ
2. ಮನೆಯನ್ನು, ಕರುವನ್ನು, ಏನನ್ನು, ಶಾಲೆಯನ್ನು.= ಏನನ್ನು
3. ಬಾಗಿಲು, ಕಿಟಕಿ, ಜೋಳಿಗೆ, ಅಟ್ಟ. = ಜೋಳಿಗೆ
4. ಸರಸರ, ಬನ್ನಿಬನ್ನಿ, ಸಟ್ಟನೆ, ಪಿಳಿಪಿಳಿ. = ಸಟ್ಟನೆ
5. ಕಣ್ಣು, ದೇಹ, ಕಿವಿ, ಮೂಗು. = ದೇಹ

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

1 .ಶಿರಸಾವಹಿಸಿ : ನಾನು ಗುರುಹಿರಿಯರು ಹೇಳಿದ ಮಾತನ್ನು ಶಿರಸಾವಹಿಸಿ ಮಾಡುತ್ತೇನೆ.
2. ಆಕಸ್ಮಿಕ : ನಾನು ದಾರಿಯಲ್ಲಿ ಹೋಗುತ್ತಿದ್ದಾಗ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದೆನು.
3. ಛೀಮಾರಿ : ನನ್ನ ಸೋಮಾರಿತನವನ್ನು ನೋಡಿ ನಮ್ಮ ತಂದೆಯವರು ನನಗೆ ಛೀಮಾರಿ ಹಾಕಿದರು.
4.ಪ್ರೋತ್ಸಾಹ : ಶಾಲೆಯಲ್ಲಿ ನಮಗೆ ಪ್ರೋತ್ಸಾಹದಾಯಕ ಯೋಜನೆಗಳು ದೊರೆಯುತ್ತಿವೆ.
5. ಕನಿಕರ : ದುರ್ಬಲರಿಗೆ ಕನಿಕರ ತೋರಿಸಬೇಕು.
6. ಅಂಗಲಾಚು : ಪ್ರವಾಸಕ್ಕೆ ಕಳಿಸಿಕೊಡಬೇಕೆಂದು ನಮ್ಮ ತಂದೆಯನ್ನು ಅಂಗಲಾಚಿದೆನು.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

Scanned with CamScanner

ಕರುಣೆ x ನಿಷ್ಕರುಣೆ    ಸಾಧಾರಣ x ಅಸಾಧಾರಣ

ಕಷ್ಟ x ಸುಖ    ಪ್ರೋತ್ಸಾಹಿಸು x ಕಡೆಗಣಿಸು

**ಈ) ಕೆಳಗಿನ ಪದಗಳಿಗೆ ಬಹುವಚನ ರೂಪಗಳನ್ನು ಬರೆಯಿರಿ.**

ಭಿಕ್ಷುಕ– ಭಿಕ್ಷುಕರು    ಚೀಲ– ಚೀಲಗಳು    ಸೋಮಾರಿ– ಸೋಮಾರಿಗಳು

ಬಾಗಿಲು– ಬಾಗಿಲುಗಳು    ಮಗು– ಮಕ್ಕಳು    ಕವಿತೆ– ಕವಿತೆಗಳು

**ಉ) ಕೆಳಗಿನ ಪದಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಬರೆಯಿರಿ.**

1. ಮನೆಯಿಂದ = ಇಂದ – ತೃತೀಯ ವಿಭಕ್ತಿ ಪ್ರತ್ಯಯ
3. ಊಟವನ್ನು = ಅನ್ನು – ದ್ವಿತೀಯ ವಿಭಕ್ತಿ ಪ್ರತ್ಯಯ
4. ಪುಸ್ತಕದ = ಅ – ಷಷ್ಠೀ ವಿಭಕ್ತಿ ಪ್ರತ್ಯಯ
5. ದಾರಿಯಲ್ಲಿ = ಅಲ್ಲಿ – ಸಪ್ತಮಿ ವಿಭಕ್ತಿ ಪ್ರತ್ಯಯ

**4. ಸೈದ್ಧಾಂತಿಕ ವ್ಯಾಕರಣ :**

*** ಸಂಧಿಗಳು**

ಎರಡು ಅಕ್ಷರಗಳು ಕಾಲವಿಳಂಬವಿಲ್ಲದಂತೆ ಕೂಡುವುದಕ್ಕೆ 'ಸಂಧಿ' ಎಂದು ಹೆಸರು.

**ಸಂಸ್ಕೃತ ಸಂಧಿಗಳು :**

**ಸಂಸ್ಕೃತ ಸ್ವರಸಂಧಿಗಳು :**

**1.ಸವರ್ಣದೀರ್ಘಸಂಧಿ :**

ಉದಾ : **ಪೂರ್ವಪದ + ಉತ್ತರಪದ = ಸಂಧಿಪದ**

ದೇವ + ಆಲಯ = ದೇವಾಲಯ (ಅ + ಆ = ಆ)

ಮಹಾ + ಅನುಭಾವ = ಮಹಾನುಭಾವ (ಆ + ಅ = ಆ)

ಗಿರಿ + ಇಂದ್ರ = ಗಿರೀಂದ್ರ (ಇ + ಇ = ಈ)

ಗುರು + ಉಪದೇಶ = ಗುರೂಪದೇಶ (ಉ + ಉ = ಊ)

**2. ಗುಣಸಂಧಿ :.**

ಉದಾ : **ಪೂರ್ವಪದ + ಉತ್ತರಪದ = ಸಂಧಿಪದ**

ದೇವ + ಈಶ = ದೇವೇಶ (ಅ + ಈ = ಏ)

ಮಹಾ + ಉತ್ಸವ = ಮಹೋತ್ಸವ (ಆ + ಉ = ಓ)

ಮಹಾ + ಋಷಿ = ಮಹರ್ಷಿ (ಆ + ಋ = ಅರ್)

**3. ವೃದ್ಧಿಸಂಧಿ :**

ಉದಾ : **ಪೂರ್ವಪದ + ಉತ್ತರಪದ = ಸಂಧಿಪದ**

ಏಕ + ಏಕ = ಏಕೈಕ (ಅ + ಏ = ಐ)

ಭಾವ + ಐಕ್ಯ = ಭಾವೈಕ್ಯ (ಅ + ಐ = ಐ)

ಜಲ + ಓಘ = ಜಲೌಘ (ಅ + ಓ = ಔ)

ವನ + ಔಷಧ = ವನೌಷಧ (ಅ + ಔ = ಔ)

**4. ಯಣ್‌ಸಂಧಿ :**

ಉದಾ : **ಪೂರ್ವಪದ + ಉತ್ತರಪದ = ಸಂಧಿಪದ**

ಅತಿ + ಉಕ್ತಿ = ಅತ್ಯುಕ್ತಿ

ಮನು + ಅಂತರ = ಮನ್ವಂತರ

ಪಿತೃ + ಆರ್ಜಿತ = ಪಿತ್ರಾರ್ಜಿತ

**ಸಂಸ್ಕೃತ ವ್ಯಂಜನ ಸಂಧಿಗಳು :**

**5. ಜಸ್ತ್ವಸಂಧಿ :**

ಉದಾ : **ಪೂರ್ವಪದ + ಉತ್ತರಪದ = ಸಂಧಿಪದ**

ವಾಕ್ + ದೇವಿ = ವಾಗ್ದೇವಿ

ಅಚ್ + ಅಂತ = ಅಜಂತ

ಷಟ್ + ಆನನ = ಷಡಾನನ

ಸತ್ + ಆನಂದ = ಸದಾನಂದ

Scanned with CamScanner

ಅಪ್ + ಧಿ = ಅಬ್ಧಿ

6. ಶ್ಚುತ್ವಸಂಧಿ :

ಉದಾ : ಪೂರ್ವಪದ + ಉತ್ತರಪದ = ಸಂಧಿಪದ

ಮನಸ್ + ಶುದ್ಧಿ = ಮನಶ್ಶುದ್ಧಿ

ಸತ್ + ಚಿತ್ರ = ಸಚ್ಚಿತ್ರ

ಜಗತ್ + ಜ್ಯೋತಿ = ಜಗಜ್ಜ್ಯೋತಿ

7. ಅನುನಾಸಿಕಸಂಧಿ :

ಉದಾ : ಪೂರ್ವಪದ + ಉತ್ತರಪದ = ಸಂಧಿಪದ

ದಿಕ್ + ನಾಗ = ದಿಙ್ನಾಗ

ಷಟ್ + ಮಾಸ = ಷಣ್ಮಾಸ

ಚಿತ್ + ಮೂಲ = ಚಿನ್ಮೂಲ

Scanned with CamScanner